# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ವಿಧಾನಸಭಾ ಸದಸ್ಯರ ಹೆಸರು | : | ಶ್ರೀ. ತಿಪ್ಪಣ್ಣಪ್ಪ ಕಮಕನೂರು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 616 (615) |
| ಉತ್ತರಿಸಬೇಕಾದ ದಿನಾಂಕ | : | 12.03.2025 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕರಾವಳಿ ವಲಯ ನಿರ್ವಹಣೆಯ ವ್ಯಾಪ್ತಿಗೆ ಬರುವ ಪ್ರದೇಶದ ಗ್ರಾಮವಾರು ಮೀನುಗಾರರ ಕುಟುಂಬಗಳ ಸಂಖ್ಯೆ ಎಷ್ಟು; | ಉಡುಪಿ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಗೆ ಒಳಪಡುವ ಗ್ರಾಮವಾರು ಮೀನುಗಾರರ ಕುಟುಂಬಗಳ ವಿವರಗಳನ್ನು ಕೇಂದ್ರೀಯ ಸಮುದ್ರ ಮೀನುಗಾರರ ಸಂಶೋಧನಾ ಸಂಸ್ಥೆ (Central Marine Fisheries Research Institute), ಕೊಚ್ಚಿ ರವರ ಅಧಿಕೃತ ವೆಬ್‌ಸೈಟ್ www.cmfri.org.in ನಲ್ಲಿ ಸಮುದ್ರ ಮೀನುಗಾರಿಕೆ ಜನಗಣತಿ 2016ರ ವರದಿಯನುಸಾರ ಪರಿಶೀಲಿಸಿ, ಪ್ರಕಟಿಸಿರುವ ಗ್ರಾಮವಾರು ಮೀನುಗಾರರ ಕುಟುಂಬಗಳ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಸದರಿ ವಲಯದಲ್ಲಿ ವಾಸಿಸುವ ಮತ್ತು ಬಳಕೆಯಲ್ಲಿರುವ ಮೀನುಗಾರರ ಭೂ ಪ್ರದೇಶಗಳನ್ನು ಕರಾವಳಿ ವಲಯ ನಿರ್ವಹಣೆ ಯೋಜನಾ ನಕ್ಷೆಗಳಲ್ಲಿ ಯಾವಾಗ ಗುರುತಿಸಲಾಗುವುದು; | ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2019 ರಂತೆ ಕರಾವಳಿ ವಲಯ ನಿರ್ವಹಣಾ ಯೋಜನಾ ನಕ್ಷೆಯನ್ನು (CZMP) ತಯಾರಿಸಿ ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಪತ್ರ ಸಂಖ್ಯೆ: F.No.IA3-12/14/2021-IA-III, ದಿನಾಂಕ: 02.09.2022 ರಂತೆ ಅನುಮೋದನೆ ಪಡೆಯಲಾಗಿರುತ್ತದೆ. ಸದರಿ ಅನುಮೋದಿತ CZMP ನಕ್ಷೆಯಲ್ಲಿ ಮೀನುಗಾರಿಕೆ ರಸ್ತೆ, ಮೀನು ಸಂತಾನೋತ್ಪತ್ತಿ ಪ್ರದೇಶ, ಮೀನುಗಾರಿಕೆ ಬಂದರು/ Landing Centre ಗಳನ್ನು ಗುರುತಿಸಲಾಗಿರುತ್ತದೆ. |
| ಇ) | ಸದರಿ ಪ್ರದೇಶದಲ್ಲಿ ಮೀನುಗಾರಿಕೆಗೆ ಇರುವ ಸೌಲಭ್ಯಗಳಾವುವು? (ವಿಶೇಷ ಅನುದಾನ ಮಾಹಿತಿ ನೀಡುವುದು) | ಮೀನುಗಾರಿಕೆ ಇಲಾಖೆಯು ಒದಗಿಸಿರುವ ಸದರಿ ಪ್ರದೇಶದಲ್ಲಿ ಮೀನುಗಾರಿಕೆಗೆ ಇರುವ ಸೌಲಭ್ಯಗಳ ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

**ಸಂಖ್ಯೆ:** ಅಪಜೀ 67 ಇಎನ್‌ವಿ 2025

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

| ಸಂಕ್ಷಿಪ್ತ ವಿವರ | | | |
| --- | --- | --- | --- |
| ಕ್ರಮ ಸಂಖ್ಯೆ | ಜಿಲ್ಲೆ | ಮೀನುಗಾರಿಕಾ ಗ್ರಾಮಗಳ ಸಂಖ್ಯೆ | ಮೀನುಗಾರರ ಕುಟುಂಬಗಳ ಸಂಖ್ಯೆ |
| 1 | ದಕ್ಷಿಣ ಕನ್ನಡ | 22 | 3,610 |
| 2 | ಉಡುಪಿ | 54 | 11,976 |
| 3 | ಉತ್ತರಕನ್ನಡ | 86 | 16,893 |
| **ಒಟ್ಟು** | | **162** | **32,479** |

ಅನುಬಂಧ - 1

## TABLE 1. **VILLAGE SUMMARY**

| Sl No. | Name of the village | Fishermen families | Traditional fishermen families | BPL families | Fisherfolk population |
|---|---|---|---|---|---|
| **DISTRICT:** DAKSHINA KANNADA | | | | | |
| **TALUK:** MANGALURU | | | | | |
| 1 | Baikampady | 60 | 60 | 15 | 256 |
| 2 | Bolar | 63 | 59 | 4 | 316 |
| 3 | Boloor | 113 | 112 | 29 | 605 |
| 4 | Chithrapu | 50 | 50 | 46 | 230 |
| 5 | Haleyangadi | 36 | 36 | 26 | 148 |
| 6 | Hoige Bazar | 170 | 170 | 42 | 816 |
| 7 | Hosabettu | 228 | 226 | 66 | 972 |
| 8 | Idya | 90 | 90 | 15 | 378 |
| 9 | Kasaba Bengre | 517 | 517 | 176 | 3,573 |
| 10 | Kudroli Bengre | 143 | 143 | 94 | 654 |
| 11 | Kulai/Chitrapura | 165 | 165 | 42 | 723 |
| 12 | Mangalore City Corporation | 18 | 6 | 0 | 90 |
| 13 | Mithrapatna/Mukka | 135 | 130 | 43 | 654 |
| 14 | Mulihithlu | 45 | 45 | 9 | 258 |
| 15 | Mulki | 45 | 45 | 38 | 237 |
| 16 | Panambur | 189 | 189 | 55 | 776 |
| 17 | Sasihithlu | 240 | 238 | 155 | 1,135 |
| 18 | Someswar | 120 | 103 | 55 | 624 |
| 19 | Surathkal (Guddekoppal) | 37 | 37 | 12 | 155 |
| 20 | Thannirubavi | 63 | 63 | 37 | 314 |
| 21 | Thota Bengre | 525 | 521 | 159 | 2,210 |
| 22 | Ullala | 558 | 487 | 186 | 3,210 |
| DAKSHINA KANNADA TOTAL | | 3,610 | 3,492 | 1,304 | 18,334 |
| **DISTRICT:** UDUPI | | | | | |
| 1 | Anagally | 271 | 249 | 262 | 1,161 |

TABLE 1. **Contd...**

| Sl No. | Name of the village | Fishermen families | Traditional fishermen families | BPL families | Fisherfolk population |
|---|---|---|---|---|---|
| 2 | Beejadi | 175 | 175 | 171 | 1,148 |
| 3 | Bijoor | 33 | 33 | 32 | 138 |
| 4 | Byndoor / Theggarse | 70 | 69 | 68 | 399 |
| 5 | Gangoli | 969 | 902 | 910 | 4,828 |
| 6 | Gopadi | 61 | 61 | 60 | 370 |
| 7 | Gujjadi | 162 | 158 | 147 | 965 |
| 8 | Hangaluru | 45 | 0 | 16 | 233 |
| 9 | Hemmady | 345 | 343 | 343 | 2,146 |
| 10 | Hosadu | 144 | 143 | 139 | 761 |
| 11 | Kandavara | 7 | 7 | 7 | 42 |
| 12 | Kerrgal | 5 | 5 | 2 | 24 |
| 13 | Kirimanjeshwara | 466 | 450 | 459 | 2,326 |
| 14 | Koni | 52 | 49 | 46 | 362 |
| 15 | Koteshwar | 157 | 156 | 156 | 1,036 |
| 16 | Kumbashi | 113 | 113 | 104 | 687 |
| 17 | Kundapur Kodi | 345 | 339 | 297 | 2,256 |
| 18 | Kundapur Town | 458 | 458 | 398 | 2,230 |
| 19 | Maravante | 336 | 336 | 331 | 1,914 |
| 20 | Navunda | 244 | 244 | 225 | 1,467 |
| 21 | Paduvari | 326 | 326 | 324 | 1,802 |
| 22 | Shiroor | 660 | 658 | 609 | 4,069 |
| 23 | Tallur | 144 | 78 | 141 | 863 |
| 24 | Thekkate | 132 | 132 | 131 | 868 |
| 25 | Trasi | 67 | 67 | 67 | 350 |
| 26 | Uppunda | 1,020 | 1,020 | 998 | 4,816 |
| 27 | Vaderahobli | 5 | 5 | 5 | 43 |
| 28 | Yedthare | 15 | 15 | 15 | 97 |

TABLE 1. **Contd...**

| Sl No. | Name of the village | Fishermen families | Traditional fishermen families | BPL families | Fisherfolk population |
|---|---|---|---|---|---|
| **TALUK:** UDUPI | | | | | |
| 29 | Ambalapady | 215 | 108 | 127 | 1,061 |
| 30 | Badanidiyoor | 90 | 80 | 57 | 500 |
| 31 | Barkur | 40 | 40 | 38 | 182 |
| 32 | Haradi | 140 | 115 | 130 | 736 |
| 33 | Hejmadi | 503 | 469 | 293 | 1,683 |
| 34 | Irody | 113 | 67 | 102 | 514 |
| 35 | Kadekar | 242 | 224 | 157 | 1,438 |
| 36 | Kaupu | 308 | 307 | 227 | 1,366 |
| 37 | Kodavoor | 716 | 535 | 297 | 3,689 |
| 38 | Kodi | 542 | 513 | 510 | 3,963 |
| 39 | Kota | 261 | 258 | 245 | 1,632 |
| 40 | Kotathattu | 232 | 227 | 225 | 1,376 |
| 41 | Malpe | 241 | 151 | 100 | 1,293 |
| 42 | Mattu | 120 | 119 | 88 | 672 |
| 43 | Muloor | 62 | 61 | 57 | 286 |
| 44 | Padubidri | 153 | 153 | 138 | 673 |
| 45 | Paduthonse | 261 | 225 | 205 | 1,395 |
| 46 | Palimaru | 6 | 4 | 3 | 20 |
| 47 | Saligrama | 155 | 79 | 130 | 913 |
| 48 | Thenkanidiyoor | 135 | 122 | 72 | 596 |
| 49 | Udyavara | 187 | 131 | 101 | 1,057 |
| 50 | Uliyaragoli | 61 | 61 | 47 | 358 |
| 51 | Uppur | 21 | 21 | 20 | 149 |
| 52 | Varambally | 53 | 53 | 49 | 289 |
| 53 | Yermal Bada | 191 | 191 | 176 | 918 |
| 54 | Yermal Thenka | 101 | 100 | 93 | 519 |
| UDUPI TOTAL | | 11,976 | 11,005 | 10,150 | 64,679 |

## TABLE 1. **Contd...**

| Sl No. | Name of the village | Fishermen families | Traditional fishermen families | BPL families | Fisherfolk population |
|---|---|---|---|---|---|
| **DISTRICT:** UTTARA KANNADA | | | | | |
| **TALUK:** ANKOLA | | | | | |
| 1 | Agargone | 149 | 149 | 147 | 724 |
| 2 | Babrawada | 30 | 30 | 30 | 110 |
| 3 | Balale | 15 | 15 | 15 | 54 |
| 4 | Bavikeri | 726 | 725 | 710 | 2,882 |
| 5 | Belambare | 420 | 420 | 417 | 1,720 |
| 6 | Belekeri | 553 | 536 | 545 | 2,176 |
| 7 | Belihoige | 67 | 65 | 66 | 228 |
| 8 | Belse-Shiroor | 75 | 75 | 71 | 316 |
| 9 | Dandebag | 135 | 132 | 125 | 532 |
| 10 | Harwada | 579 | 579 | 537 | 2,232 |
| 11 | Honnebail | 186 | 186 | 186 | 741 |
| 12 | Kangel | 84 | 83 | 81 | 309 |
| 13 | Kurwa | 41 | 40 | 39 | 137 |
| 14 | Sagadageri | 31 | 31 | 30 | 155 |
| 15 | Shediguli | 73 | 73 | 72 | 290 |
| 16 | Ulavare | 44 | 44 | 43 | 237 |
| **TALUK:** BHATKAL | | | | | |
| 17 | Belke | 388 | 386 | 373 | 1,910 |
| 18 | Bengre | 221 | 213 | 210 | 1,073 |
| 19 | Byloor | 318 | 227 | 314 | 1,435 |
| 20 | Heble | 673 | 671 | 645 | 3,175 |
| 21 | Jali | 132 | 113 | 132 | 671 |
| 22 | Kaikini | 213 | 210 | 205 | 1,050 |
| 23 | Mavalli | 243 | 242 | 229 | 1,218 |
| 24 | Mavinkurve | 604 | 598 | 573 | 2,743 |
| 25 | Mundalli | 213 | 209 | 196 | 1,020 |
| 26 | Shirali | 374 | 361 | 360 | 1,749 |

TABLE 1. **Contd...**

| Sl No. | Name of the village | Fishermen families | Traditional fishermen families | BPL families | Fisherfolk population |
|---|---|---|---|---|---|
| **TALUK:** HONNAVARA | | | | | |
| 27 | Balakur | 131 | 131 | 131 | 671 |
| 28 | Chandavara | 17 | 17 | 17 | 79 |
| 29 | Haladipura | 241 | 241 | 224 | 1,233 |
| 30 | Handinbalu | 16 | 11 | 16 | 100 |
| 31 | Herengadi | 51 | 36 | 46 | 229 |
| 32 | Honnavara | 376 | 356 | 357 | 1,690 |
| 33 | Idagungi | 103 | 73 | 94 | 455 |
| 34 | Jalavalli | 72 | 29 | 67 | 345 |
| 35 | Kadatoka | 7 | 7 | 7 | 24 |
| 36 | Karki | 222 | 220 | 219 | 984 |
| 37 | Kasarkode | 752 | 719 | 696 | 3,736 |
| 38 | Kelaginoor | 90 | 85 | 88 | 340 |
| 39 | Kharva | 15 | 3 | 11 | 78 |
| 40 | Kodani | 23 | 21 | 22 | 140 |
| 41 | Kudrigi | 6 | 6 | 6 | 30 |
| 42 | Magod | 31 | 31 | 25 | 174 |
| 43 | Manki | 726 | 725 | 719 | 3,496 |
| 44 | Mavinakurve | 133 | 133 | 132 | 543 |
| 45 | Mugwa | 100 | 100 | 98 | 474 |
| 46 | Salkode | 10 | 10 | 10 | 35 |
| 47 | Upponi | 57 | 57 | 41 | 276 |
| **TALUK:** KARWAR | | | | | |
| 48 | Amdalli | 724 | 720 | 692 | 2,568 |
| 49 | Chandia | 17 | 17 | 7 | 53 |
| 50 | Chittacula | 785 | 781 | 718 | 2,997 |
| 51 | Kadwad | 75 | 75 | 69 | 237 |
| 52 | Karwar Muncipal Area | 1,312 | 1,292 | 1,148 | 4,905 |

TABLE 1. **Contd...**

| Sl No. | Name of the village | Fishermen families | Traditional fishermen families | BPL families | Fisherfolk population |
|---|---|---|---|---|---|
| 53 | Majalli | 787 | 787 | 718 | 2,998 |
| **TALUK:** KUMTA | | | | | |
| 54 | Aghanashini | 135 | 135 | 132 | 611 |
| 55 | Alvedande | 113 | 113 | 88 | 510 |
| 56 | Bargi | 237 | 236 | 219 | 1,112 |
| 57 | Bavikodla | 257 | 241 | 250 | 1,258 |
| 58 | Beerkodi | 32 | 30 | 31 | 202 |
| 59 | Belehoige | 55 | 55 | 54 | 230 |
| 60 | Betkuli | 93 | 93 | 91 | 465 |
| 61 | Dareshwar | 81 | 81 | 81 | 385 |
| 62 | Devgiri | 87 | 87 | 80 | 415 |
| 63 | Divigi | 192 | 183 | 188 | 1,005 |
| 64 | Gokarn | 174 | 174 | 163 | 911 |
| 65 | Gudeangadi | 46 | 46 | 46 | 221 |
| 66 | Halkar | 49 | 49 | 34 | 217 |
| 67 | Heeregutti | 26 | 26 | 24 | 111 |
| 68 | Heni | 88 | 88 | 87 | 375 |
| 69 | Hollangadda | 133 | 133 | 133 | 555 |
| 70 | Hoskatta | 68 | 68 | 64 | 331 |
| 71 | Hubbangeri | 154 | 153 | 154 | 804 |
| 72 | Kadle | 25 | 25 | 25 | 122 |
| 73 | Kagal | 131 | 131 | 119 | 655 |
| 74 | Kodkani (Aramanekoppa) | 60 | 51 | 59 | 295 |
| 75 | Kodkani (Shashihital) | 18 | 17 | 17 | 86 |
| 76 | Lukkeri | 46 | 45 | 46 | 274 |
| 77 | Madangeri | 60 | 60 | 55 | 259 |
| 78 | Masoor | 23 | 23 | 20 | 141 |
| 79 | Mirzan | 120 | 114 | 111 | 649 |

TABLE 1. **Contd...**

| Sl No. | Name of the village | Fishermen families | Traditional fishermen families | BPL families | Fisherfolk population |
|---|---|---|---|---|---|
| 80 | Morba | 96 | 96 | 87 | 404 |
| 81 | Nadumaskeri | 180 | 105 | 174 | 1,014 |
| 82 | Nushikote | 74 | 74 | 68 | 296 |
| 83 | Shashihittal | 117 | 116 | 111 | 582 |
| 84 | Tadri | 90 | 89 | 73 | 417 |
| 85 | Torke | 43 | 43 | 42 | 207 |
| 86 | Wanahalli | 324 | 324 | 203 | 2,080 |
| UTTARA KANNADA TOTAL | | 16,893 | 16,400 | 15,858 | 74,976 |
| **KARNATAKA TOTAL** | | **32,479** | **30,897** | **27,312** | **1,57,989** |

**ಅನುಬಂಧ-(1)**

**ಪ್ರಸ್ತುತ 2024-25 ನೇ ಸಾಲಿನಲ್ಲಿ ಕರಾವಳಿ ಮೀನುಗಾರರಿಗಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ:**

1. **PMMSY-ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ (ಕೇಂದ್ರ ಪುರಸ್ಕೃತ ಯೋಜನೆ)**

ಮೀನುಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೊಜನೆಯಡಿ ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ಅಲಂಕಾರಿಕಾ ಮತ್ತು ಮನರಂಜನಾ ಮೀನುಗಾರಿಕೆ ಅಭಿವೃದ್ಧಿ, ನೂತನ ತಂತ್ರಜ್ಞಾನ ಅಳವಡಿಕೆ, ಹಿಡುವಳಿ ನಂತರದ ಶೀತಲ ಸರಪಳಿ ಮೂಲಸೌಕರ್ಯ, ಮೀನು ಆಹಾರ ತಯಾರಿಕಾ ಘಟಕ, ಮೀನು ಮಾರುಕಟ್ಟೆಗಳು ಮತ್ತು ಮಾರಾಟ ಮೂಲಸೌಕರ್ಯಗಳಿಗೆ ಸಹಾಯಧನ ನೀಡಲಾಗುತ್ತಿದೆ. ಸದರಿ ಯೋಜನೆಯಡಿ ಸಾಮಾನ್ಯವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ.40 ರಷ್ಟು ಸಹಾಯಯಧನ ಹಾಗೂ ಮಹಿಳೆಯರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ. 60 ರಷ್ಟು ಸಹಾಯಯಧನವನ್ನು ನೀಡಲಾಗುತ್ತಿದೆ.

2. **ಮೀನುಗಾರಿಕೆ ಸಲಕರಣೆ ಕಿಟ್ಟುಗಳವಿತರಣೆ**

ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ಟು ರೂಪದಲ್ಲಿ ಖರೀದಿಸಲು ಅವಕಾಶ ಮಾಡಲಾಗಿದೆ. ಈ ಯೋಜನೆಯ ಘಟಕ ವೆಚ್ಚ ಗರಿಷ್ಠ ರೂ.10,000 ಗಳಾಗಿದ್ದು, ಶೇ.100 ರಷ್ಟು ಸಹಾಯಧನ ನೀಡಲು ಅವಕಾಶ ಮಾಡಲಾಗಿದೆ.

3. **ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ**

ಈ ಯೋಜನೆಯಡಿ ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುತ್ ಪ್ರತಿ ಯೂನಿಟ್‌ಗೆ ರೂ.1.75 ರಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಘಟಕಕ್ಕೆ ವಾರ್ಷಿಕ ಗರಿಷ್ಠ ರೂ.3.50 ಲಕ್ಷ ಸಹಾಯಧನ ನೀಡಲಾಗುವುದು.

4. **ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು**

ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ವಾಣಿಜ್ಯ ಬ್ಯಾಂಕುಗಳಿಂದ ಅಲ್ಪಾವಧಿ ಸಾಲ ತೆಗೆದುಕೊಂಡು ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ. ಮೀನುಗಾರರು ರೂ.50,000 ಗಳವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ.

ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ 50,000 ರೂ.ಗಳ ವರೆಗೆ ಶೇ.2 ರ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ನೀಡುತ್ತಿರುವ ಸಾಲವನ್ನು 2018-19 ನೇ ಸಾಲಿನಿಂದ ಶೂನ್ಯ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ. 2023-24 ನೇ ಸಾಲಿನಿಂದ ಸದರಿ ಯೋಜನೆಯಡಿ ಸಾಲದ ಮಿತಿಯನ್ನು ರೂ.50,000/-ಗಳಿಂದ ರೂ.3,00,000/-ಗಳವರೆಗೆ ಹೆಚ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

4. **ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು** :

**ಮರಣ ಪ್ರಕರಣ**: ಮೀನುಗಾರಿಕೆಯಲ್ಲಿ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಮರಣಹೊಂದಿದ ಪ್ರಕರಣಗಳಿಗೆ ಹಾಗೂ ಮೀನುಗಾರಿಕೆಯಲ್ಲಿ ತೊಡಗಿದಾಗ ಅನಾರೋಗ್ಯದಿಂದ ಮೃತಪಟ್ಟ ಪ್ರಕರಣಗಳಿಗೆ ರೂ.8.00 ಲಕ್ಷ ಪರಿಹಾರ ನೀಡಲಾಗುವುದು.

**ಅಂಗವಿಕಲತೆ**: ಮೀನುಗಾರಿಕೆಯಲ್ಲಿ ತೊಡಗಿರುವಾಗ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ಮೀನುಗಾರರು ಶಾಶ್ವತ ಅಂಗವಿಕಲರಾದಲ್ಲಿ ರೂ.4.00 ಲಕ್ಷ ಹಾಗೂ ಭಾಗಶ: ಅಂಗವಿಕಲರಾದಲ್ಲಿ ರೂ.2.00 ಲಕ್ಷ ಪರಿಹಾರ ನೀಡಲಾಗುವುದು.

**ವೈದ್ಯಕೀಯ ವೆಚ್ಚ**: ಮೀನುಗಾರಿಕೆಯಲ್ಲಿ ಅಥವಾ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ವೈದ್ಯಕೀಯ ಶುಶ್ರೂಷೆಗಾಗಿ ಮಾಡಿತ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ ರೂ.3.00 ಲಕ್ಷಗಳ ಮಿತಿಗೊಳಪಟ್ಟು ಪರಿಹಾರ ನೀಡಲಾಗುವುದು.

**ದೋಣಿ/ಬಲೆ/ಮೀನುಗಾರಿಕೆ ಸಲಕರಣೆಗಳ ಸ್ವತ್ತು ಹಾನಿ**: ಪ್ರಾಕೃತಿಕ ವಿಕೋಪದಿಂದಾದ ನಾಡದೋಣಿ/ಮೋಟರೀಕೃತ/ಯಾಂತ್ರೀಕೃತ ದೋಣಿಗಳ ಹಾನಿಗೆ ಹಾಗೂ ಬಲೆ ಇನ್ನಿತರ ಸ್ವತ್ತು ಹಾನಿಗೆ ಅವುಗಳ ಖರೀದಿ ಮೌಲ್ಯದ ಶೇ.50 ರಷ್ಟು ಮೌಲ್ಯವನ್ನು ಅಥವಾ ಗರಿಷ್ಟ ರೂ.10.00 ಲಕ್ಷಗಳಿಗೆ ಒಳಪಟ್ಟು ಪರಿಹಾರವಾಗಿ ನೀಡಲಾಗುವುದು.

5. **ಸಾಂಪ್ರದಾಯಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು**:

ಸಾಂಪ್ರದಾಯಿಕ ದೋಣಿಗಳಿಗೆ ಪಡಿತರ ದರದಲ್ಲಿ 300 ಲೀಟರ್ ಸೀಮೆಎಣ್ಣೆಯನ್ನು ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ. ಕರಾವಳಿಯ 3 ಜಿಲ್ಲೆಗಳ ನಾಡದೋಣಿ ಮೀನುಗಾರರಿಗೆ ರೂ.35/- ರಿಯಾಯತಿ ದರದಲ್ಲಿ ಕೈಗಾರಿಕಾ ಸೀಮೆಎಣ್ಣೆಯನ್ನು ನಿರಂತರವಾಗಿ ಪೂರೈಸಲು ಕ್ರಮ ಕೈಗೊಳ್ಳಲಾಗಿದೆ.

6. **ಮೀನುಗಾರಿಕೆ ದೋಣಿಗಳಿಗೆ ಡೀಸಲ್ ಮಾರಾಟ ತೆರಿಗೆ ಮರುಪಾವತಿ**

2021-22 ನೇ ಸಾಲಿನಿಂದ ಯಾಂತ್ರೀಕೃತ ದೋಣಿಗಳಿಗೆ 1.5 ಲಕ್ಷ ಕಿಲೋ ಲೀಟರ್‌ಗೆ ಡೀಸೇಲ್ ಡೇಲೀವರಿ ಪಾಯಿಂಟ್‌ನಲ್ಲಿಯೇ ಕರರಹಿತ ದರದಲ್ಲಿ ವಿತರಿಸಲಾಗುತ್ತಿದೆ. ಪ್ರಸ್ತುತ 2023-24 ನೇ ಸಾಲಿನಲ್ಲಿ ಯಾಂತ್ರೀಕೃತ ದೋಣಿಗಳಿಗೆ ನೀಡುತ್ತಿರುವ ಡೀಸೆಲ್ ಮಿತಿಯನ್ನು 1.5 ಲಕ್ಷ ಕಿಲೋ ಲೀಟರ್ ಯಿಂದ 2.00 ಲಕ್ಷ ಕಿಲೋ ಲೀಟರ್‌ಗೆ ಹೆಚ್ಚಿಸಲಾಗಿದೆ.

7. **ಮತ್ಸ್ಯಾಶ್ರಯ ಯೋಜನೆ**:

ರಾಜ್ಯ ಸರ್ಕಾರವು 2006-07ನೇ ಸಾಲಿನಿಂದ "ಮತ್ಸ್ಯಾಶ್ರಯ ಯೋಜನೆ"ಯನ್ನು ಪ್ರಾರಂಭಿಸಿದ್ದು, ಇದರ ಅಡಿಯಲ್ಲಿ ವಸತಿ ರಹಿತ ಮೀನುಗಾರರು ಅಥವಾ ವಾಸಿಸಲು ಯೋಗ್ಯ ಮನೆ ಇಲ್ಲದ ಮೀನುಗಾರರಿಗೆ ಪ್ರತಿ ವರ್ಷ ಅನುದಾನ ಲಭ್ಯತೆಯ ಆಧಾರದ ಮೇಲೆ ಮನೆಗಳನ್ನು ಹಂಚಿಕೆ ಮಾಡಲಾಗುತ್ತದೆ.

"2024-25 ನೇ ಸಾಲಿನಲ್ಲಿ10,000 ವಸತಿ ರಹಿತ ಮೀನುಗಾರರಿಗೆ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿಯಲ್ಲಿ ಮನೆಗಳನ್ನು ನಿರ್ಮಿಸಲು ಸಹಾಯಧನ ನೀಡಲಾಗುವುದು" ಎಂದು ಪ್ರಸ್ತುತ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದೆ.

8. **ಮೀನುಗಾರರ ಕಲ್ಯಾಣ ಯೋಜನೆಗಳು (ಕೇಂದ್ರ ಪುರಸ್ಕೃತ ಯೋಜನೆ)**

**ಅ) ಕಡಲ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ**

ಉಳಿತಾಯ ಹಾಗೂ ಪರಿಹಾರ ಯೋಜನೆಯಡಿ ಕರಾವಳಿ ಮೀನುಗಾರರಿಂದ ರೂ.1500/- ಗಳನ್ನು ಮೀನುಗಾರಿಕೆ ಅವಧಿಯಲ್ಲಿ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ರೂ.1500/- ಮತ್ತು ರಾಜ್ಯ ಸರ್ಕಾರ ರೂ.1500/- ಸೇರಿಸಿ ಹೀಗೆ ಒಟ್ಟು ರೂ.4500/- ಗಳನ್ನು ಮೀನುಗಾರಿಕೆ ಇಲ್ಲದ 3 ತಿಂಗಳುಗಳಲ್ಲಿ ಪ್ರತಿ ತಿಂಗಳಿಗೆ ರೂ.1500 ರಂತೆ ಪ್ರತಿ ಮೀನುಗಾರರಿಗೆ ನೀಡಲಾಗುವುದು.

"ಮತ್ಸ್ಯ ಆಶಾಕಿರಣ ಯೋಜನೆಯಡಿ ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಕರಾವಳಿಯ ಮೀನುಗಾರರಿಗೆ ನೀಡುತ್ತಿರುವ ಪರಿಹಾರ ಮೊತ್ತದ ರಾಜ್ಯದ ಪಾಲನ್ನು 1,500 ರೂ.ಗಳಿಂದ 3,000 ರೂ.ಗಳಿಗೆ ಹೆಚ್ಚಿಸಲಾಗುವುದು ಎಂದು ಪ್ರಸ್ತುತ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದ್ದು, ಹೆಚ್ಚಿಸಲಾಗಿದೆ.

### ಆ) ಸಾಮೂಹಿಕ ವಿಮಾ ಯೋಜನೆ:

ರಾಜ್ಯದ 80,000 ಮೀನುಗಾರರಿಗೆ ಗುಂಪು ವಿಮಾ ಸೌಲಭ್ಯ ಒದಗಿಸಲು ರಾಜ್ಯದ ವಿಮಾ ಕಂತನ್ನು ಪಾವತಿಸಲು ಅನುದಾನ ಒದಗಿಸಲಾಗಿದೆ. ಈ ಯೋಜನೆಯಡಿ ವಿಮಾ ಸೌಲಭ್ಯವನ್ನು ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.500,000/- ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.100,000 ಗಳ ಪರಿಹಾರ ನೀಡಲಾಗುವುದು. ವಿಮಾ ಕಂತಿನ ಹಣ ಪ್ರತಿ ವರ್ಷ ಹೈದರಾಬಾದ್‍ನಲ್ಲಿರುವ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲಾಗುವುದು.

### 9. ಮೀನುಗಾರಿಕೆ ಬಂದರುಗಳ ನಿರ್ಮಾಣ (ಕೇಂದ್ರ ಪುರಸ್ಕೃತ ಯೋಜನೆ)

ಮಂಜೂರಾದ ಮೀನುಗಾರಿಕೆ ಬಂದರುಗಳ ಕಾಮಗಾರಿ ಮುಂದುವರಿಕೆಗೆ ಹಾಗೂ ಹೊಸ ಯೋಜನೆಗಳ ಕೈಗೊಳ್ಳಲು ಅವಕಾಶ ಮಾಡಲಾಗಿದೆ. ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ ಕೇಂದ್ರ ಸರ್ಕಾರವು ಪ್ರತಿಶತ 50ರಷ್ಟು ಮತ್ತು ರಾಜ್ಯ ಸರ್ಕಾರವು ಪ್ರತಿಶತ 50ರಷ್ಟನ್ನು ಭರಿಸುತ್ತದೆ. ಈಗಾಗಲೇ ಮಂಜೂರಾದ ಯೋಜನೆಗಳು 75:25 ಅನುಪಾತದಲ್ಲಿಯೇ ಮುಂದುವರೆಯುತ್ತದೆ.

### 10. ಮೀನುಗಾರಿಕೆ ಜೆಟ್ಟಿ ಮತ್ತು ಇಳಿದಾಣಗಳ ನಿರ್ಮಾಣ ಮತ್ತು ನವೀಕರಣ

ಮೀನುಗಾರಿಕೆ ಇಳಿದಾಣ ಕೇಂದ್ರಗಳ ನಿರ್ಮಾಣ ಹಾಗೂ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಲೆಕ್ಕ ಶೀರ್ಷಿಕೆಯಡಿ ಪ್ರಗತಿಯಲ್ಲಿರುವ ಕೊಡೇರಿ ಮೀನುಗಾರಿಕೆ ಬಂದರಿನ ಹಾಗೂ ತೆಂಗಿನಗುಂಡಿ ಅಳ್ವೆಕೋಡಿ ಮೀನುಗಾರಿಕೆ ತಂಗುದಾಣದ ಕಾಮಗಾರಿಗಳನ್ನು ಮುಂದುವರಿಸಲು ಹಾಗೂ ಮರವಂತೆ, ಶಿರೂರು-ಅಳ್ವೆಗದ್ದೆ ಮತ್ತು ಕುಂದಾಪುರ ಕೋಡಿಯಲ್ಲಿ ಬಂದರು ಮತ್ತು ತಡೆಗೋಡೆಗಳ ಕಾಮಗಾರಿಗಳನ್ನು ಪ್ರಾರಂಭಿಸಲು ಹಾಗೂ ಭಟ್ಕಳ ಮತ್ತು ಕಾರವಾರ ಮೀನುಗಾರಿಕೆ ಬಂದರುಗಳಲ್ಲಿಯ ಧಕ್ಕೆಗಳನ್ನು ವಿಸ್ತರಿಸಲು ಅನುದಾನ ನೀಡಲಾಗಿದೆ. ಆಮದಳ್ಳಿ ಮೀನುಗಾರಿಕೆ ಕಾಮಗಾರಿಗಳನ್ನು ಕೇಂದ್ರ ಸರ್ಕಾರದ ಶೇ.75 ರಷ್ಟು ನೆರವಿನೊಂದಿಗೆ ಕೈಗೊಳ್ಳಲಾಗುವುದು.

### 11. ಮೀನುಗಾರಿಕೆ ಕೊಂಡಿ ರಸ್ತೆಗಳ ಸೇತುವೆಗಳ ಮತ್ತು ಜೆಟ್ಟಿಗಳ ನಿರ್ಮಾಣ ನಬಾರ್ಡ್ಸ್ ಹಾಯ

ಈ ಲೆಕ್ಕ ಶೀರ್ಷಿಕೆಯಡಿ ನಬಾರ್ಡ್‍ನ ನೆರವಿನೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಮೀನುಗಾರಿಕೆ ರಸ್ತೆ, ಸೇತುವೆ ಮತ್ತು ಜೆಟ್ಟಿಗಳ ನಿರ್ಮಾಣ, ಶುಚಿಯಾದ ಮೀನು

ಮಾರುಕಟ್ಟೆಗಳ ನಿರ್ಮಾಣ, ಮೀನುಮರಿ ಉತ್ಪಾದನಾ ಕೇಂದ್ರಗಳ ಅಧುನೀಕರಣ ಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ ಮಂಜೂರಾದ ಕಾಮಗಾರಿಗಳನ್ನು ಪ್ರಾರಂಭಿಸಲು / ಮುಂದುವರಿಸಲು ಅನುದಾನ ಒದಗಿಸಲಾಗಿದೆ.

12. -"**ವಿದ್ಯಾನಿಧಿ**" **ಯೋಜನೆ**

ಕರ್ನಾಟಕ ರಾಜ್ಯದಲ್ಲಿ ಸುಮಾರು 10 ಲಕ್ಷ ಮೀನುಗಾರರಿದ್ದು, ಮೀನುಗಾರರು ಆರ್ಥಿಕವಾಗಿ ಹಿಂದುಳಿದವರಾಗಿರುತ್ತಾರೆ. ರೈತರ ಮಕ್ಕಳ ಹೆಚ್ಚಿನ ಹಾಗೂ ಉನ್ನತ ಶಿಕ್ಷಣ ಪ್ರೋತ್ಸಾಹಿಸಲು ಶಿಷ್ಯವೇತನ (Scholarship) ಯೋಜನೆ-"ವಿದ್ಯಾನಿಧಿ" ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

13. **ಕಿಸಾನ್ ಕ್ರೆಡಿಟ್ ಕಾರ್ಡ್** ಮೀನುಗಾರರಿಗೆ ವಿತರಣೆ ಮಾಡಲಾಗುತ್ತಿದೆ.

14. **ಮೀನುಗಾರರ ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆ ಮತ್ತು ಪ್ರೋತ್ಸಾಹ**

ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.

**ಮೀನುಗಾರಿಕೆ ನಿರ್ದೇಶಕರು**